

ಇಲ್ಲಿಗೆ ಬಂದು ಮರಗಳಲ್ಲಿ ಗೂಡು ಕಟ್ಟಿ, ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಈ ಅವಧಿಯಲ್ಲಿನ ಅವುಗಳ ಸಂಭ್ರಮ ಮಾನವರ ಬದುಕಿನ ಸಂಭ್ರಮವನ್ನೇ ಮೀರಿಸುವಂತದ್ದು. ಸುತ್ತಲಿನ ಪ್ರದೇಶಗಳಿಂದ ಜಲಕಳೆ, ಕಡ್ಡಿಗಳನ್ನು ತಂದು ಮರಗಳ ರೆಂಬೆಯ ಮೇಲೆ ಗೂಡು ಕಟ್ಟುವ ಅವು, ಆಹಾರಕ್ಕಾಗಿ ಕೆಳಗೆ ಇರುವ ಕೆರೆಗಳಲ್ಲಿನ ಮೀನುಗಳನ್ನು ಬೇಟೆಯಾಡಿ ಮರಿಗಳಿಗೆ ಉಣಿಸುವ ಕ್ಷಣಗಳು ಅಪೂರ್ವ. ರೆಂಬೆಯ ಮೇಲೆ ಕುಳಿತು ಕುಣಿದಾಡುವ ಅವು ಮರಿಗಳಿಗೆ ತೊಟ್ಟಿಲು ತೂಗುತ್ತವೆ. ಕೆರೆಯ ನೀರನ್ನು ಗಂಟಲಲ್ಲಿ ಸಂಗ್ರಹಿಸಿ, ಮರಿಗಳತ್ತ ಹೋಗಿ ಅವುಗಳ ಬಾಯಲ್ಲಿ ನೀರನ್ನು ಹಾಕುವ ದೃಶ್ಯಕ್ಷಣಗಳು ಅನನ್ಯ.

## ಅಪೂರ್ವ ಜೀವವೈವಿಧ್ಯ

ಸೈಬಿರಿಯನ್ ಕ್ರೇನ್, ಈಗಲ್, ಪೇಲ್ ಮತ್ತು ಮಾರ್ಷ್ ಹ್ಯಾರಿಯರ್ಸ್, ಕಾಮನ್ ಟೇಲ್, ಇಂಡಿಯನ್ ಲಿಟಲ್ ರಿಂಗ್ಡ್ ಪ್ಲೋವರ್ ಈ ಅಭಯಾರಣ್ಯಕ್ಕೆ ಚಳಿಗಾಲದಲ್ಲಿ ಬಂದು ಹೋಗುವ ವಲಸೆ ಹಕ್ಕಿಗಳು. ಪೇಂಟೆಡ್ ಸ್ಟಾರ್ಕ್, ಸ್ನೇಕ್ ಬರ್ಡ್, ಗ್ರೇ ಗೂಸ್ ಮುಂತಾದ ಪಕ್ಷಿಗಳೊಂದಿಗೆ, ನರಿಗಳು, ಜಿಂಕೆಗಳು, ಸಾಂಬಾರ್, ನೀಲ್ಗಾಯ್, ಕಾಡುಬೆಕ್ಕು, ಕಾಡು ಹಂದಿ, ಭಾರತೀಯ ಮುಳ್ಳುಹಂದಿ, ಮುಂಗಲಿಗಳು, ಫಿಶ್ ಕ್ಯಾಟ್ ಇನ್ನೂ ಮುಂತಾದ ಸಸ್ತನಿಗಳು ಇಲ್ಲುಂಟು.

ಪಕ್ಷಿಗಳಷ್ಟೇ ಅಲ್ಲ – ಭಾರತೀಯ ಕಲ್ಲು ಹೆಬ್ಬಾವುಗಳು, ಕಾಳಿಂಗಸರ್ಪ, ಸಾಮಾನ್ಯ ಹಾವುಗಳು, ಕುರುಡು ಹಾವುಗಳು, ರಂಗುರಂಗಿನ ಹಚ್ಚೆಯಂತಹ ವಿನ್ಯಾಸವುಳ್ಳ ಹಾವುಗಳು, ಮರಳು ಹಾವು, ಉಡಗಳು, ವಿವಿಧ ಜಾತಿಯ ಓತಿಕ್ಯಾತಗಳು ಇನ್ನೂ ಮುಂತಾದ ಸರೀಸೃಪಗಳು ಛಾಯಾಗ್ರಾಹಕರಿಗೆ ದೃಶ್ಯದೌತಣವನ್ನು ಒದಗಿಸುತ್ತವೆ.

ಬಾನಾಡಿಗಳ ವೀಕ್ಷಣೆ ಹಾಗೂ ಛಾಯಾಗ್ರಹಣಕ್ಕೆ ಅಕ್ಟೋಬರ್‌ದಿಂದ



ಮಾರ್ಚ್‌ವರೆಗೆ ಅತ್ಯುತ್ತಮ ದಿನಗಳು. ದಿನವಿಡೀ ಅಭಯಾರಣ್ಯದಲ್ಲಿ ಪಕ್ಷಿ ವೀಕ್ಷಿಸುವವರಿಗೆ ಸೈಕಲ್ ರಿಕ್ಷಾಗಳು (ಗಂಟೆಗೆ 100 ರೂಪಾಯಿ) ಹಾಗೂ ಬಾಡಿಗೆ ಸೈಕಲ್ (ದಿನಕ್ಕೆ 40 ರೂಪಾಯಿ) ದೊರೆಯುತ್ತವೆ.

ಆಗ್ರಾದಿಂದ 58 ಕಿ.ಮೀ., ನವದೆಹಲಿಯಿಂದ 182 ಕಿ.ಮೀ. ರಸ್ತೆ ಮಾರ್ಗ, ಮತ್ತು ಈ ಎರಡೂ ನಗರಗಳಿಂದಲೂ ಭರತಪುರಕ್ಕೆ ರೈಲು ಸಂಪರ್ಕವಿದೆ. ಹಳೆಯ ಕಾಲದ ಮನೆಗಳಲ್ಲಿನ ಹೋಂ ಸ್ಟೇಗಳು, ಹೋಟೆಲ್‌ಗಳನ್ನು ಮುಂಗಡ ಕಾಯ್ದಿರಿಸಿದರೆ ಪ್ರವಾಸ ಪ್ರಯಾಸವಾಗುವುದಿಲ್ಲ.